

ಮದುವೆ ಮಾಡಿಸಿದವರು ಅವರಿಬ್ಬರ ಸ್ವಭಾವಗಳನ್ನು ಹೋಲಿಕೆ ಮಾಡಿ ವಿಚಾರ ಮಾಡಿರಲೇ ಇಲ್ಲ. ಹೀಗಾಗಿ ಪದುಮಣ್ಣನ ವಿರುದ್ಧ ಸ್ವಭಾವದ ನಾಗಕ್ಕ ಅವನ ಕೈ ಹಿಡಿದು ಬಂದಳು. ಅವಳೋ ಪಕ್ಕಾ ಒಂಟಿಗೂಬೆ. ಜನರ ತಲೆ ಕಂಡರೇ ಅವಳಿಗಾಗದು.

ಹೊರತಿರುಗಾಟವೆಂದರೆ ಮುಖ ಸಿಂಡರಿಸುತ್ತಾಳೆ. ಸದಾಕಾಲ ಬಾಗಿಲು ಹಾಕಿಕೊಂಡು ಒಳಗೇ ಇರುವ ಮನೆಗುಬ್ಬಿ. ತಾನು, ತನ್ನ ಗಂಡ ಇಬ್ಬರೇ ರಾಜ-ರಾಣಿಯರ ಹಾಗೆ ಬದುಕಬೇಕೆಂದು ಕನಸು ಕಂಡವಳು. ಅವಳಿಗೆ ಪದುಮಣ್ಣನ ವಿಶ್ವಕುಟುಂಬಿತನ ಕಂಡು ದಿಗಿಲಾಗಿಬಿಟ್ಟಿತು. ಅವನ ಹಿಂದೆ ಹಿಂಡುಗಟ್ಟಿಕೊಂಡು ಬರುವ ಕಕ್ಷಿದಾರರನ್ನು ಗೌ ಗೌ ಎಂದು ಕೂಗಿ ಓಡಿಸಿಬಿಟ್ಟಳು. ಯಕ್ಷಗಾನ, ತಾಳಮದ್ದಲೆ, ದೇವಕಾರ್ಯ, ಊರ ಸಮಾರಾಧನೆ ಅಂತೆಲ್ಲ ಊರೊಟ್ಟಿನ ಕೆಲಸಕ್ಕಾಗಿ ದಿನಾಲೂ ಹುಡುಕಿಕೊಂಡು ಬರುವ ಪುರಬಾಂಧವರಿಗೂ ಅವಳಿಂದ ಮಂಗಳಾರತಿ ಸಿಕ್ಕಿತು. ಆದರೆ ಪದುಮಣ್ಣನ ಪಾಡು ನೋಡಿ. ಈಗ ಬಂದ ಹೆಂಡತಿಗಾಗಿ ಲಾಗಾಯ್ತಿನಿಂದ ಮಾಡಿಕೊಂಡು ಬಂದ ಜೀವನವನ್ನು ಬದಲಾಯಿಸಿಕೊಳ್ಳಲಿಕ್ಕೆ ಸಾಧ್ಯವೇ? ಅದಕ್ಕಾಗಿ ಪದುಮಣ್ಣ ಮನೆಯಿಂದಾಚೆಗೆ ಇರುವುದೇ ಜಾಸ್ತಿಯಾಯಿತು. ಹೆಂಡತಿ ಬೈಯುತ್ತಾಳೆ ಅಂತ ಅವಳಿಂದ ವಿಷಯ ಮುಚ್ಚಿಡುವುದು ಶುರುವಾಯಿತು.

ಊರುಪಕಾರಕ್ಕೆ ಅಂತ ಗೊತ್ತಾದರೆ ಬೈಯುತ್ತಾಳೆ ಅಂತ ಎಲ್ಲಾದಕ್ಕೂ ಕೇಸಿಗಾಗಿ ಹೋಗುತ್ತೇನೆ ಅನ್ನತೊಡಗಿದ. ಹೆಂಡತಿಯೆದುರು ಹೇಳಿದ ಸುಳ್ಳು ಯಾವುದು, ಇರುವ ನಿಜ ಯಾವುದು ಅನ್ನುವುದೆಲ್ಲ ಕಲಸಿ ಹೋಗಿ ಅವನ ಸ್ಮರಣೆಯ ಗೊಂದಲಗಳು ಹೆಚ್ಚಾಗಿಬಿಟ್ಟವು. ಹೀಗೆ ಮದುವೆಯಾದದ್ದೇ ತಡ ಪದುಮಣ್ಣನಿಗೆ ಒಂದು ಬಗೆಯ ಮರೆವಿನಂತಹ ಗೊಂದಲದ ತೊಂದರೆ ಶುರುವಾಗಿಬಿಟ್ಟಿತು. ಮರೆವೆಂದರೆ ಪೂರಾ ಮರೆವು ಕೂಡಾ ಅಲ್ಲ. ಆದರೆ ತೀರಾ ಮುಖ್ಯ ವಿಷಯವನ್ನು ಬಿಟ್ಟು ಉಳಿದೆಲ್ಲ ಸಣ್ಣ-ಪುಟ್ಟ ವಿಷಯಗಳು ಸವಿವರವಾಗಿ ನೆನಪಲ್ಲಿ ಹಸಿರಾಗಿ ಉಳಿಯುವುದು, ಆದರೆ ಬಹು